# ಸಿಂಗಪುರದ ಯಶೋಗಾಥೆ

ಸ್ವಾಮಿ ಜಗದಾತ್ಮಾನಂದ

**ಸಿಂಗಪುರದ ಒಂದು ಸೂಕ್ತ ಚಿತ್ರವನ್ನು ನೀಡುತ್ತ ಸ್ವಾಮಿ ಜಗದಾತ್ಮಾನಂದರು ಆ ದೇಶದ ಯಶಸ್ಸಿನ ಗುಟ್ಟನ್ನು ವಿವರಿಸಿರುವರು. ಸ್ವಾಮೀಜಿಯವರು ಸಿಂಗಪುರದಲ್ಲಿರುವ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದರು. ಅವರ 'ಬದುಕಲು ಕಲಿಯಿರಿ' ಪುಸ್ತಕದ ಪ್ರತಿಗಳು ಲಕ್ಷಕ್ಕೂ ಹೆಚ್ಚು ಮಾರಾಟವಾಗಿವೆ.**

## ಸುವ್ಯವಸ್ಥಿತ ನಗರ

ಸಿಂಗಪುರಕ್ಕೆ ಭೇಟಿ ನೀಡುವ ಯಾರೇ ಆಗಲಿ ಅದರಿಂದ ಗಾಢವಾಗಿ ಪ್ರಭಾವಿತರಾಗದೆ ಇರುವುದಿಲ್ಲ. ಸಿಂಗಪುರದ ಬಗ್ಗೆ ಅವರ ಒಟ್ಟು ಅನಿಸಿಕೆಯನ್ನು ಇಷ್ಟರಿಂದಲೇ ಧ್ವನಿಸಬಹುದು: "ಇಲ್ಲಿ ಪ್ರತಿಯೊಂದೂ ಕಾರ್ಯಶೀಲವಾಗಿದೆ."

ನಿಜ, ಸಿಂಗಪುರದಲ್ಲಿ ಪ್ರತಿಯೊಂದೂ ನಮ್ಮ ನಿರೀಕ್ಷೆ ಅಥವಾ ಕಲ್ಪನೆಗೂ ಮೀರಿ ಚೆನ್ನಾಗಿ ನಡೆಯುತ್ತದೆ. ಇಲ್ಲಿಂದ ಯಾವುದೇ ಸಮಯದಲ್ಲಿ, ಜಗತ್ತಿನ ಯಾವುದೇ ಮೂಲೆಗೆ ಫೋನ್ ಮಾಡಿನೋಡಿ; ಕ್ಷಣಾರ್ಧದಲ್ಲಿ ಲೈನ್ ಸಿಗುತ್ತದೆ. ನೀವು ಪ್ರೇಕ್ಷಣೆ, ವ್ಯಾಪಾರ ಇಲ್ಲವೆ ಭೇಟಿಗಾಗಿ ಈ ನಗರದ ವಿಭಿನ್ನ ಭಾಗಗಳಿಗೆ ಹೋಗಬೇಕೆಂದರೆ, ಅದಕ್ಕೆ ಟ್ಯಾಕ್ಸಿಯೇ ಆಗಬೇಕೆಂದೇನಿಲ್ಲ; ಬಸ್ಸು ಇಲ್ಲವೆ ಎಂ. ಆರ್. ಟಿ. (ವೇಗದ ರೈಲು)ಗಳಂಥ ಸರ್ಕಾರೀ ವ್ಯವಸ್ಥೆಯನ್ನು ಕೂಡ ನೆಚ್ಚಿಕೊಂಡು ನಿಖರವಾದ ಯೋಜನಾ ಪಟ್ಟಿ ಹಾಕಿಕೊಳ್ಳಬಹುದು. ಅಲ್ಲದೆ ಇವು ಸುಖಕರ, ದಕ್ಷ, ಮತ್ತು ಟ್ಯಾಕ್ಸಿಗಿಂತ ತುಂಬ ಅಗ್ಗ ಕೂಡ. ಇಲ್ಲಿನ ವಿಮಾನನಿಲ್ದಾಣದ ಮೂಲಕ ವರ್ಷಕ್ಕೆ ಒಂದು ಕೋಟಿಗಿಂತ ಹೆಚ್ಚಿನ ಪ್ರಯಾಣಿಕರು ಹಾದು ಹೋಗುತ್ತಾರೆ; ಆದರೂ ಭಾರತದಲ್ಲಿ ಕಾಣುವಂಥ ಉದ್ದುದ್ದನೆಯ ಕ್ಯೂಗಳಿರುವುದಿಲ್ಲ.

ಪ್ರತಿದಿನವೂ ೪೩೦ಕ್ಕಿಂತ ಹೆಚ್ಚು ವಿಮಾನಗಳು ಬರುವ ಇಲ್ಲವೆ ಹೊರಡುವ ಈ ನಿಲ್ದಾಣವು ವಿಶ್ವದಲ್ಲೇ ಅತ್ಯುತ್ತಮ ಎಂದು ಜನರಿಂದ ತೀರ್ಮಾನಿಸಲ್ಪಟ್ಟಿದೆ. ದಿನವೂ ದೂರದೂರದಿಂದ ಸುಮಾರು ೮೦೦ ಹಡಗುಗಳು ಬಂದುಹೋಗುವ ಇಲ್ಲಿನ ರೇವು ಕೂಡ ಜಗತ್ತಿನಲ್ಲೇ ಅತಿ ದಟ್ಟಣೆಯದು. ಸಿಂಗಪುರದ ತಲಾ ವಾರ್ಷಿಕ ಆದಾಯ ಸುಮಾರು ಒಂಬತ್ತುಲಕ್ಷ ರೂಪಾಯಿಗಳು – ಜಪಾನಿನ ಬಳಿಕ ಏಷಿಯಾದಲ್ಲೇ ಇದು ಅತ್ಯಧಿಕ. ಈ ನಗರ-ರಾಷ್ಟ್ರದ ವಿಸ್ತೀರ್ಣ ೬೪೭ ಚ. ಕೀ. ಮೀ.ಗಳಾಗಿದ್ದು , ಜನಸಂಖ್ಯೆ ೩೧ ಲಕ್ಷ. ಇವರಲ್ಲಿ ಶೇ. ೭೭ ರಷ್ಟು ಚೀನೀಮೂಲದವರು, ಶೇ. ೧೪ ಮಲಯರು, ಹಾಗೂ ಶೇ. ೭ ಭಾರತೀಯರು. ಜೊತೆಗೆ, ತಾತ್ಕಾಲಿಕ ಹುದ್ದೆಗಳಲ್ಲಿರುವ ಆರು ಲಕ್ಷ ವಿದೇಶೀಯರು ಇಲ್ಲಿ ವಾಸವಾಗಿದ್ದು, ಇವರಲ್ಲಿ ಉನ್ನತ ಉದ್ಯಮಪತಿಗಳಿಂದ ಹಿಡಿದು ಕಂಪ್ಯೂಟರ್ ತಂತ್ರಜ್ಞರು, ಮನೆಗೆಲಸದವರು, ಕಟ್ಟಡ ಕಾರ್ಮಿಕರವರೆಗೆ ನಾನಾ ಬಗೆಯವರಿದ್ದಾರೆ.

ಸಿಂಗಪುರವು ಯಾವುದೇ ನೈಸರ್ಗಿಕ ಸಂಪತ್ತಿಲ್ಲದ, ಸಾಕಷ್ಟು ಕುಡಿಯುವ ನೀರು ಕೂಡ ಇಲ್ಲದ, ಒಂದು ದ್ವೀಪ. ಹಾಗಿರುವಾಗ, ಇಲ್ಲಿ ಇಷ್ಟೆಲ್ಲ ಶ್ರೇಷ್ಠತೆಯನ್ನು ಸಾಧಿಸಲು ಹೇಗೆ ಸಾಧ್ಯವಾಯಿತು ಎಂದು ನಾವು ವಿಸ್ಮಯಗೊಳ್ಳಬಹುದು. ಇದಕ್ಕುತ್ತರ; ಸಂಘಟನೆ, ಪರಿಶ್ರಮ, ಆತ್ಮವಿಶ್ವಾಸ, ಮತ್ತು ಭ್ರಷ್ಟಾಚಾರವಿಲ್ಲದಿರುವುದು. (ಈ ಭ್ರಷ್ಟಾಚಾರವೇ ಏಷಿಯಾದ ಇತರ ಅನೇಕ ದೇಶಗಳ ಪಾಲಿಗೆ ರೋಗವಾಗಿರುವುದು.)

## ಐತಿಹಾಸಿಕ ಹಿನ್ನೆಲೆ

ಭೌಗೋಳಿಕವಾಗಿ ಸಿಂಗಪುರ ಒಂದು ಆಯಕಟ್ಟಿನ ಸ್ಥಾನದಲ್ಲಿದೆ. ವ್ಯಾಪಾರೀ ಹಾಗೂ ಯುದ್ಧತಂತ್ರ ದೃಷ್ಟಿಯಿಂದ ಇದಕ್ಕೆ ಹೆಚ್ಚಿನ ಮಹತ್ವ. ೧೯ನೇ ಶತಮಾನದ ಆದಿಯಲ್ಲಿ, ಡಚ್ ಹಾಗೂ ಪೋರ್ಚುಗೀಸ್ ವಸಾಹತುದಾರರೊಂದಿಗೆ ಪೈಪೋಟಿ ನಡೆಸುತ್ತ, ತನ್ನ ದೇಶದ ವಾಣಿಜ್ಯ ಹಾಗೂ ರಕ್ಷಣಾ ಉದ್ದೇಶಗಳ ಸಾಧನೆಗಾಗಿ ಇಲ್ಲಿಗೆ ಬಂದ ಇಂಗ್ಲೆಂಡಿನ ಥಾಮಸ್ ಸ್ಟಾಂಫರ್ಡ್ ರ್‍ಯಾಫಲ್ಸ್, ಇಲ್ಲಿನ ಈ ಮಹತ್ವವನ್ನು ಗುರುತಿಸಿದ. ಆಗ ಕೇವಲ ೧೫೦ ಜನರಿಂದ ಕೂಡಿದ್ದ ಹಳ್ಳಿಯಾಗಿದ್ದ ಈ ದ್ವೀಪದ ಮೇಲೆ ಆತ ೧೮೧೯ರಲ್ಲಿ ಕಾಲಿರಿಸಿದ. ಕ್ರಮೇಣ ಸಿಂಗಪುರವು ಒಂದು 'ಬ್ರಿಟಿಷ್ ಕಿರೀಟ ವಸಾಹತು'ವಾಗಿ, ಅಂತರ ರಾಷ್ಟ್ರೀಯ ಸರಕು ಸಾಗಾಣಿಕೆಯಲ್ಲಿ 'ಉಗ್ರಾಣ ಕೇಂದ್ರ' ದ ಸ್ಥಾನ ಪಡೆದು, ವೇಗವಾಗಿ ಅಭಿವೃದ್ಧಿ ಸಾಧಿಸಿತು. ಆದರೆ ಮುಂದೆ ಎರಡನೇ ಮಹಾಯುದ್ಧದಲ್ಲಿ ಸಿಂಗಪುರ, ಮಲಯಾ ಮತ್ತಿತರ ಏಷಿಯನ್ ದೇಶಗಳು ಜಪಾನಿನ ಆಕ್ರಮಣಕ್ಕೆ ಈಡಾದಾಗ, ಬ್ರಿಟಿಷರ ಅಜೇಯತ್ವದ ಬಗ್ಗೆ ಇಲ್ಲಿನವರಿಗಿದ್ದ ಭ್ರಮೆ ಕರಗಿತು; ಜೊತೆಗೇ ಅವರ ದೃಷ್ಟಿಕೋನ ಬದಲಾಗಿ, ಸ್ವಾತಂತ್ರ್ಯದ ಹಂಬಲ ಹೆಚ್ಚತೊಡಗಿತು. ಆದ್ದರಿಂದ ೧೯೪೫ರಲ್ಲಿ ಬ್ರಿಟಿಷರು ಈ ದ್ವೀಪಗಳನ್ನು ಪುನಃ ಗೆದ್ದುಕೊಂಡರಾದರೂ, ಹಿಂದಿನ ರಾಜಕೀಯ ಸ್ಥಿತಿ ಮರಳಲು ಸಾಧ್ಯವಿರಲಿಲ್ಲ. ಅಲ್ಲದೆ ಭಾರತ, ಬರ್ಮಾ ಮುಂತಾದವು ಬಿಡುಗಡೆ ಹೊಂದಿದ ಮೇಲೆ ಇದಕ್ಕೂ ಸ್ವಾತಂತ್ರ್ಯ ನೀಡುವುದು ಅನಿವಾರ್ಯವಾಯಿತು.

೧೯೫೯ರಲ್ಲಿ ಸ್ವಾಯತ್ತವಾದ ಸಿಂಗಪುರ, ೧೯೬೩ರಲ್ಲಿ ನೆರೆಯ ಮಲಯ ಮತ್ತೆರಡು ರಾಜ್ಯಗಳೊಂದಿಗೆ 'ಮಲೇಶಿಯನ್ ಒಕ್ಕೂಟ' ರಚಿಸಿಕೊಂಡಿತು. ಆದರೆ ಶೀಘ್ರದಲ್ಲೇ ಇದು ಮುರಿದುಬಿದ್ದು

೧೯೬೫ರಲ್ಲಿ ಸಿಂಗಪುರ ಸ್ವತಂತ್ರವಾಯಿತು.

### ಆರ್ಥಿಕ ಕ್ರಾಂತಿ

ಅಲ್ಲಿಂದಾಚೆಗೆ ಈ ದೇಶವು, ವೇಗದ ಆರ್ಥಿಕ ಪ್ರಗತಿ ಸಾಧಿಸುವಂಥ ಸಕ್ರಿಯ ಯೋಜನೆಯಲ್ಲಿ ತೊಡಗಿಸಿಕೊಂಡು, ಕೈಗಾರಿಕೋತ್ಪನ್ನ, ವಾಣಿಜ್ಯ ಸಾಗಾಣಿಕೆ ಹಾಗೂ ಆರ್ಥಿಕ ಸೇವೆಗಳ ಅಂತರರಾಷ್ಟ್ರೀಯ ಕೇಂದ್ರವಾಗಿ ಮಾರ್ಪಾಡಾಗತೊಡಗಿತು. ಅದಕ್ಕೆ ಬೇಕಾದ ಮೂಲಭೂತ ಹಂದರ ಮೊದಲೇ ಇತ್ತು. ಜೊತೆಗೆ ಇಲ್ಲಿನ ಆಯಕಟ್ಟಿನ ಸ್ಥಾನ, ರಾಜಕೀಯ ಸ್ಥಿರತೆ ಹಾಗೂ ರಾಷ್ಟ್ರದ ಪ್ರಗತಿಗೆ ಬದ್ಧರಾದ ಕಾರ್ಮಿಕ ವರ್ಗ– ಇವುಗಳಿಂದ ಆಕರ್ಷಿತರಾದ ವಿದೇಶೀ ಬಂಡವಾಳದಾರರು ತಮ್ಮ ನವತಾಂತ್ರಿಕತೆ, ಆಡಳಿತ ಸಾಮರ್ಥ್ಯ, ಸಂಶೋಧನಾ ಸೌಲಭ್ಯಗಳು ಹಾಗೂ ಮಾರುಕಟ್ಟೆಗಳನ್ನು ತಲುಪುವ ಶಕ್ತಿ– ಇವುಗಳನ್ನು ತಮ್ಮೊಂದಿಗೆ ತಂದರು. ಈಗಂತೂ ಯೂರೋಪ್, ಅಮೆರಿಕ, ಜಪಾನ್‌ಗಳ ಎಲ್ಲ ಬಹುರಾಷ್ಟ್ರೀಯ ಸಂಸ್ಥೆಗಳೂ ಇಲ್ಲಿವೆ. ಅದು ಇಲ್ಲಿನ ಸ್ಥಳೀಯ ಮಾರುಕಟ್ಟೆಯ ಆಕರ್ಷಣೆಯಿಂದಲ್ಲ– ಆದರೆ ಅದೂ ಗಣನೀಯವೇ ಸರಿ – ಬದಲಾಗಿ, ಇದನ್ನು ಸುತ್ತಲಿನ ಎಲ್ಲ ಕ್ಷೇತ್ರಗಳಿಗೂ ಆಧಾರಸ್ಥಾನ ಮಾಡಿಕೊಳ್ಳಲು.

ಸಿಂಗಪುರದ ಆರ್ಥಿಕ ಕ್ರಾಂತಿಯಲ್ಲಿ ಶಿಕ್ಷಣವೊಂದು ಪ್ರಮುಖ ಅಂಶವಾಗಿತ್ತು ಎಂಬುದನ್ನಿಲ್ಲಿ ಹೇಳಲೇಬೇಕು. ಅದರಿಂದಾಗಿ ಈಗ ಸಾಕ್ಷರರ ಪ್ರಮಾಣ ಶೇ. ೯೩ರಷ್ಟಿದೆ. ಪ್ರಾಥಮಿಕ ಶಿಕ್ಷಣವು ಕಡ್ಡಾಯ ಹಾಗೂ ಉಚಿತ. ಸರ್ವತೋಮುಖ ಸಾಮರ್ಥ್ಯದ, ಕಾರ್ಯನಿಷ್ಠ ವ್ಯಕ್ತಿಗಳನ್ನು ನಿರ್ಮಿಸುವಂತೆ ಇಲ್ಲಿನ ಶಿಕ್ಷಣನೀತಿ ರೂಪಿತವಾಗಿದೆ. ತಾಂತ್ರಿಕ-ಯಾಂತ್ರಿಕ ವಿಜ್ಞಾನಕ್ಕೆ ಬಹಳವಾದ ಒತ್ತು ಕೊಡುತ್ತಿದ್ದಾರೆ. ಅದರಲ್ಲೂ ಕಂಪ್ಯೂಟರ್ ಅಳವಡಿಕೆಗೆ ನೀಡಿರುವ ಪ್ರಾಮುಖ್ಯವಂತೂ ಅಷ್ಟಿಷ್ಟಲ್ಲ. ಉದಾಹರಣೆಗೆ, ಇಲ್ಲಿನ ವಿಶ್ವವಿದ್ಯಾಲಯದ IT(ಮಾಹಿತಿ ತಂತ್ರಜ್ಞಾನ) ಜಾಲವು, ಜಗತ್ತಿನಾದ್ಯಂತದ ೬,೦೦೦ಕ್ಕೂ ಹೆಚ್ಚಿನ ವ್ಯಾಸಂಗಿಕ ಹಾಗೂ ಸಂಶೋಧನಾತ್ಮಕ ಜಾಲಗಳೊಂದಿಗೆ ಇಂಟರ್‌ನೆಟ್ ಮೂಲಕ ಸಂಪರ್ಕವೇರ್ಪಡಿಸಿದೆ.


> ಬನ್ನಿ ಮುಂದೆ, ಧೀರರಾಗಿ ಸಣ್ಣ ಬಿಲಗಳಿಂದ ಹೊರಗೆ ಬನ್ನಿ. ವಿಶಾಲವಾದ ಜಗತ್ತನ್ನು ಸುತ್ತಲೂ ನೋಡಿ. ಇತರ ರಾಷ್ಟ್ರಗಳು ಹೇಗೆ ಮುಂದುವರಿಯುತ್ತಿವೆ ಎಂಬುದನ್ನು ನೋಡಿ
>
> ಸ್ವಾಮಿ ವಿವೇಕಾನಂದ
>
> (ಒಂದು ಪತ್ರದಲ್ಲಿ)

ಗೃಹನಿರ್ಮಾಣ ಕ್ಷೇತ್ರದಲ್ಲಿ ಸರ್ಕಾರವು ಕಳೆದ ಮೂರು ದಶಕಗಳಿಂದಲೂ ಒಂದು ಯೋಜನೆಯನ್ನು ಜಾರಿಗೆ ತಂದಿದೆ. ಅದರ ಫಲವಾಗಿ ಇಂದು ಶೇ.೮೬ರಷ್ಟು ಜನರಿಗೆ ವಾಸಕ್ಕೆ ಸಾರ್ವಜನಿಕ ಕ್ಷೇತ್ರದ ಮನೆಗಳಿವೆ. ಅದರಲ್ಲೂ ನೂರಕ್ಕೆ ತೊಂಬತ್ತು ಮಂದಿಗೆ ತಮ್ಮ ತಮ್ಮ ಮನೆಯ ಒಡೆತನ ಸಿಕ್ಕಿಬಿಟ್ಟಿದೆ. ಮನೆಯ ವೆಚ್ಚವನ್ನು ನಿವಾಸಿಗಳ ಭವಿಷ್ಯ ನಿಧಿ ಕಾಣಿಕೆಯ ಮೂಲಕ ಪ್ರತಿ ತಿಂಗಳೂ ಹಿಡಿದುಕೊಳ್ಳಲಾಗುತ್ತದೆ. ಆದರೆ ಜಾಗದ ತೀವ್ರ ಅಭಾವವಿರುವುದರಿಂದ, ಮನೆಗಳು ೧೧ರಿಂದ ೩೦ ಮಹಡಿಗಳ ಕಟ್ಟಡಗಳಲ್ಲಷ್ಟೇ ಲಭ್ಯ. ನಿವಾಸಿಗಳೇ ಆಯಾ ಮನೆಯ ಮಾಲೀಕರಾಗುವ ಈ ನೀತಿಯಿಂದಾಗಿ ಜೀವನವೆಚ್ಚದಲ್ಲಿ ಬಹಳ ಏರುಪೇರುಗಳಾಗುವುದು ತಪ್ಪಿದೆಯಲ್ಲದೆ, ಜನರೆಲ್ಲರೂ ಒಟ್ಟಾರೆ ಸ್ಥಿರತೆಯನ್ನೇ ಬಯಸುವಂತಹ ಸ್ಥಿತಿ ನಿರ್ಮಾಣವಾಗಿದೆ.

ಯಾವುದೇ ಹೊಸ ಪರಿಸ್ಥಿತಿಗೆ ಥಟ್ಟನೆ ಪ್ರತಿಕ್ರಿಯಿಸಬಲ್ಲ ಹೆಗ್ಗಳಿಕೆ ಸಿಂಗಪುರದ್ದು. ಇದರ ಪುಟ್ಟಗಾತ್ರ , ಪರಸ್ಪರ ವಿರುದ್ಧ ಹಿತಾಸಕ್ತಿಗಳಿಲ್ಲದಿರುವುದು, ಹಾಗೂ ಜನಕ್ಕೆ ಸರ್ಕಾರದಲ್ಲಿರುವ ವಿಶ್ವಾಸದಿಂದಾಗಿ ಇದು ಸಾಧ್ಯವಾಗಿದೆ. ೧೯೯೭-೯೮ರಲ್ಲಿ ಏಷಿಯಾವನ್ನೆಲ್ಲ ಆರ್ಥಿಕ ಕುಸಿತ ಕಂಗೆಡಿಸಿದಾಗ, ಇಲ್ಲಿನ ಸರ್ಕಾರ ಕೂಡಲೇ ಕಾರ್ಯಪ್ರವೃತ್ತವಾಯಿತು. ಅದು ಜನರ ಸಂಬಳದಲ್ಲಿ ಕೆಲವು ಕಡಿತಗಳನ್ನು ತಂದು, ದೇಶದ ಸ್ಪರ್ಧಾತ್ಮಕ ಮೇಲುಗೈಯನ್ನು ಉಳಿಸಿಕೊಂಡಿತು. ಇದೀಗ ಈ ಲೇಖನ ಬರೆಯುವ ವೇಳೆಯಲ್ಲಿ ಅತಿ ಕಷ್ಟದ ಅವಧಿ ಕೊನೆಗೊಂಡಿರುವ ಸೂಚನೆ ಕಾಣುತ್ತಿದೆ; ಮೆಲ್ಲಗಾದರೂ ಆರ್ಥಿಕತೆ ಚೇತರಿಸಿಕೊಳ್ಳುವಂತಿದೆ. ಪೂರ್ವಸ್ಥಿತಿ ಮರಳಿದೊಡನೆಯೇ ಸಂಬಳದ ಕಡಿತಗಳನ್ನು ತೆಗೆದುಹಾಕುವುದಾಗಿ ಸರ್ಕಾರ ಭರವಸೆಯಿತ್ತಿದೆ.

ಸಿಂಗಪುರದ ಧನಿಕರನ್ನು ಸಾಮಾನ್ಯವಾಗಿ, ಅತಿ ಭೋಗವಾದಿಗಳು ಎಂದು ತಿಳಿಯಲಾಗಿದೆ. ಈ ವರ್ಗದ ಬಗ್ಗೆ ಸ್ವಲ್ಪ ವ್ಯಂಗ್ಯವಾಗಿ ಹೇಳುವುದುಂಟು: 'ಅವರ ಮನಸ್ಸಿನಲ್ಲಿರುವುದು ಈ ಐದು "C"ಗಳಷ್ಟೇ – ಕೆರಿಯರ್ (ಕಸುಬು), ಕಾಂಡೊ (ಖಾಸಗಿ ಅಪಾರ್ಟ್‌ಮೆಂಟ್), ಕಾರು, ಕ್ಯಾಶ್ ಮತ್ತು ಕ್ರೆಡಿಟ್ ಕಾರ್ಡುಗಳು' ಎಂದು. ಆದರೆ ಈ ಮಾತು ಸಂಪೂರ್ಣ ಸತ್ಯವಲ್ಲ. ಸ್ವದೇಶದ ಮತ್ತು ವಿದೇಶಗಳ ಸಂತ್ರಸ್ತರ ಮೊರೆಗೆ ಇಲ್ಲಿನ ಶ್ರೀಮಂತರು ಓಗೊಟ್ಟು, ಧಾರಾಳ ನೆರವು ನೀಡುತ್ತಾರೆ.

ಇತ್ತೀಚಿನ ಅಂಕಿ ಅಂಶಗಳ ಪ್ರಕಾರ, ಇಲ್ಲಿನ ಸುಮಾರು ಶೇ.೮೫ರಷ್ಟು ಜನರು, ತಾವು ಒಂದಲ್ಲ ಒಂದು ಮತವನ್ನೋ ಧರ್ಮವನ್ನೋ ಅವಲಂಬಿಸಿರುವುದಾಗಿ ಹೇಳಿಕೊಂಡಿದ್ದಾರೆ. ೧೯೯೫ರಲ್ಲಿ ಹತ್ತು ವರ್ಷಕ್ಕೆ ಮೇಲ್ಪಟ್ಟವರ ಸಂಖ್ಯೆ ೨೫ ಲಕ್ಷವಿತ್ತು. ಇವರಲ್ಲಿ ಎಂಟು ಲಕ್ಷಕ್ಕಿಂತ ಹೆಚ್ಚು ಬೌದ್ಧರು, ಐದೂವರೆ ಲಕ್ಷ ಟಾವೋ ಮತೀಯರು, ೩,೭೦,೦೦೦ ಕ್ರೈಸ್ತರು. ಹಿಂದೂಗಳ ಸಂಖ್ಯೆ ೮೨,೫೦೦. ಇದು ಈ ದೇಶದ ಒಟ್ಟು ಭಾರತೀಯರ ಸಂಖ್ಯೆಯ ಅರ್ಧ ಭಾಗ. ಮಂದಿರ-ಮಸೀದಿ-ಇಗರ್ಜಿಗಳೆಲ್ಲಕ್ಕೂ ಜನರು ಆಯಾ ಶುಭದಿನಗಳಲ್ಲಿ ಬಹಳಷ್ಟು ಸಂಖ್ಯೆಯಲ್ಲೇ ಹೋಗುತ್ತಾರೆ. ಒತ್ತಾಯಪೂರ್ವಕ ಬಹಿರಂಗ ಮತಾಂತರ ನಡೆಸುವ ಪ್ರಯತ್ನಗಳಿಗೆ ಸರ್ಕಾರದ ಒಪ್ಪಿಗೆಯಿಲ್ಲ. ಹದಿನೆಂಟು ವರ್ಷದ ಪುರುಷರೆಲ್ಲರಿಗೂ ಇಲ್ಲಿ ಸೇನಾ ತರಬೇತಿ ಕಡ್ಡಾಯ. ಇದನ್ನು ವಿರೋಧಿಸುವ 'ಜಹೋವನ ಸಾಕ್ಷಿ' ಎಂಬ (ಧಾರ್ಮಿಕ ವಿಚಾರದಲ್ಲಿ ಸರ್ಕಾರದ ಪರಮಾಧಿಕಾರವನ್ನು ಒಪ್ಪದ) ಒಂದು ಕ್ರೈಸ್ತ ಪಂಗಡಕ್ಕೆ ಬಹಿಷ್ಕಾರವಿದೆ. ೧೯೬೫ರಿಂದ ಒಮ್ಮೆಯೂ ಜನಾಂಗೀಯ ಕಲಹವಾಗಿಲ್ಲ ಎಂಬುದೇ ಇಲ್ಲಿನ ಧಾರ್ಮಿಕ ಸಹಿಷ್ಣುತೆಗೊಂದು ಪುರಾವೆ. ಧಾರ್ಮಿಕ ವಿಚಾರಗಳಲ್ಲಿ ಸರ್ಕಾರಕ್ಕೆ ಸಲಹೆ ನೀಡಲು ಪ್ರತಿಯೊಂದು ಧರ್ಮಕ್ಕೂ ಅದರದೇ ಆದ ಒಂದೊಂದು ಸಂಸ್ಥೆಯಿದೆ. ಅಂತರ ಧರ್ಮ ಸಂಬಂಧಗಳ ಬಗ್ಗೆ ತಿಳುವಳಿಕೆ ನೀಡಲು ಅಂತರ ಧರ್ಮ ಸಂಸ್ಥೆ ಎಂಬುದಿದ್ದು, ರಾಮಕೃಷ್ಣ ಮಿಷನ್ ಇದರ ಸದಸ್ಯತ್ವ ಹೊಂದಿದೆ.



ಸಿಂಗಪುರದ ರಾಮಕೃಷ್ಣಮಿಶನ್ನಿನ  ಕಟ್ಟಡ ಸಮೂಹದ ದೃಶ್ಯ

## ರಾಮಕೃಷ್ಣ ಮಿಷನ್

ಜೂನ್ ೧೮೯೩ರಲ್ಲಿ ವಿಶ್ವಧರ್ಮ ಸಮ್ಮೇಳನಕ್ಕೆಂದು ಹೊರಟಿದ್ದ ಸ್ವಾಮಿ ವಿವೇಕಾನಂದರು, ಸಿಂಗಪುರದಲ್ಲೂ ಸ್ವಲ್ಪಕಾಲ ಇದ್ದರು ಎಂಬುದೊಂದು ಸ್ವಾರಸ್ಯದ ಸಂಗತಿ. ಮುಂದೆ ೧೯೨೮ರಲ್ಲಿ ಇಲ್ಲೊಂದು ಕೇಂದ್ರ ಸ್ಥಾಪನೆಯಾಗಲು ಬಹುಶಃ ಇದೇ ಪ್ರೇರಣೆಯಾಯಿತು. ತನ್ನ ಆರಂಭದ ದಿನಗಳಲ್ಲಿ ರಾಮಕೃಷ್ಣ ಮಿಷನ್ ಧಾರ್ಮಿಕ ತರಗತಿಗಳನ್ನೂ ಒಂದು ರಾತ್ರಿಶಾಲೆಯನ್ನೂ ನಡೆಸುತ್ತಿತ್ತು. ಎರಡನೇ ಮಹಾಯುದ್ಧ ಮುಗಿದೊಡನೆ ಅದು ಹೆತ್ತವರನ್ನು ಕಳೆದುಕೊಂಡ, ಇಲ್ಲವೆ ಅವರಿಂದ ಅಗಲಿದ ಹಿಂದೂ ಮಕ್ಕಳಿಗಾಗಿ ಅನಾಥಾಲಯವೊಂದನ್ನು ಆರಂಭಿಸಿತು.

ಈಗ ರಾಮಕೃಷ್ಣ ಮಿಷನ್ ಐದೂ ಮುಕ್ಕಾಲು ಎಕರೆಯ ವಿಸ್ತೃತ ನಿವೇಶನ ಹೊಂದಿದೆ. ಕಳೆದೆರೆಡು ದಶಕಗಳಲ್ಲಿ, ಅದರ ಸೇವಾ ಗುಣಮಟ್ಟ ಮತ್ತಷ್ಟು ಹೆಚ್ಚಿದೆ. ಹಿಂದಿನ  ಅನಾಥಾಲಯ ಈಗ ಬಾಲಕರ ಗೃಹ (Boys' Home)ವಾಗಿ  ಬಡ ಇಲ್ಲವೆ ವಿಕ್ಷೋಭಿತ ಕುಟುಂಬಗಳಿಂದ ಬಂದ  ೪೦-೫೦ ಬಾಲಕರಿಗೆ  ಆಸರೆ ನೀಡುತ್ತಿದೆ. ಐದರಿಂದ ಹದಿನೆಂಟು ವಯಸ್ಸಿನ ಈ ಹುಡುಗರು ಸನಿಹದ ಶಾಲೆಗಳಲ್ಲಿ ಓದುತ್ತಾರೆ. ಸಂನ್ಯಾಸಿಗಳೂ ಸ್ವಯಂಸೇವಕ ಉಪಾಧ್ಯಾಯರೂ ಇವರಿಗೆ ನೈತಿಕ ಮತ್ತು ವ್ಯಕ್ತಿನಿರ್ಮಾಪಕ ಶಿಕ್ಷಣ ನೀಡುತ್ತಾರೆ.

ಆದರೆ ಎಂದಿನಿಂದಲೂ ಮಿಷನ್ನಿನ ಮುಖ್ಯ ಸೇವೆಯ ನೆಲೆಯೆಂದರೆ ಧಾರ್ಮಿಕ-ಆಧ್ಯಾತ್ಮಿಕ ಕ್ಷೇತ್ರಗಳೇ. ಇಲ್ಲಿನ ವಿಶಾಲ ಮಂದಿರದಲ್ಲಿ ನಿಯತವಾಗಿ ಪೂಜೆ ನಡೆಯುತ್ತದೆ. ಮುಖ್ಯವಾದ  ಹಿಂದೂ ಹಬ್ಬಗಳನ್ನೆಲ್ಲ ಆಚರಿಸಲಾಗುತ್ತದೆ. ಆಶ್ರಮವಾಸಿಗಳು ಶಾಸ್ತ್ರಾಧ್ಯಯನ ತರಗತಿಗಳನ್ನು ನಡೆಸಿದರೆ,  ಸ್ವಯಂಸೇವಕರು ಮಕ್ಕಳಿಗೆ ಭಜನೆ, ಸಂಸ್ಕೃತ ಮತ್ತು ಧಾರ್ಮಿಕ ವಿಚಾರಗಳನ್ನು ಹೇಳಿಕೊಡುತ್ತಾರೆ.

ಮಿಷನ್ನಿನ ಈಚಿನ ಕಾರ್ಯಗಳಲ್ಲಿ ಒಂದೆಂದರೆ, ೧೯೯೨ರಲ್ಲಿ ಅತ್ಯಾಧುನಿಕವಾದ  ಬಾಲವಾಡಿ ಹಾಗೂ ನರ್ಸರಿಯನ್ನು ಆರಂಭಿಸಿದ್ದು, ಈ ಎರಡು ಸಂಸ್ಥೆಗಳಲ್ಲಿ ಪ್ರಸ್ತುತ ವರ್ಷದ ಒಟ್ಟು ನೋಂದಣಿ ನಾನೂರರಷ್ಟಾಗಿದೆ. ಈ ಬಾಲವಾಡಿಯನ್ನು ಇಲ್ಲಿನ ಸರ್ಕಾರ ಇಂತಹ ಇತರ ಶಾಲೆಗಳಿಗೊಂದು ಮಾದರಿಯೆಂಬಂತೆ ಪರಿಗಣಿಸುತ್ತಿದೆ. ಇಲ್ಲಿ ಪ್ರವೇಶಕ್ಕಾಗಿ ಕಾಯುತ್ತಿರುವವರ ಸಂಖ್ಯೆಯೇ ಇದರ ಜನಪ್ರಿಯತೆಗೆ ಸಾಕ್ಷಿ.

ರಾಮಕೃಷ್ಣ ಮಿಷನ್ನಿನ ಆಶ್ರಯದಲ್ಲಿ ವಿದ್ಯಾರ್ಥಿ ಮಾರ್ಗದರ್ಶನ ಕೇಂದ್ರವೊಂದು ನಡೆಯುತ್ತಿದ್ದು, ಅದರ ಸೇವೆಗೂ ಬಹಳ ಬೇಡಿಕೆಯಿದೆ. ಹೋಮಿಯೋಪಥಿ ಚಿಕಿತ್ಸಾ ಕೇಂದ್ರ ಇಲ್ಲಿನ ಮತ್ತೊಂದು ಸೇವಾ ವಿಭಾಗ. ೧೯೮೩ರಲ್ಲಿ ಒಬ್ಬ ವೈದ್ಯರೊಂದಿಗೆ ಆರಂಭಗೊಂಡ ಈ ಕೇಂದ್ರ ಈಗ ಆರು ವೈದ್ಯರ ಮೂಲಕ ಹೆಚ್ಚೆಚ್ಚು ಜನರಿಗೆ ಉಚಿತ ವೈದ್ಯಕೀಯ ಸೇವೆ ನೀಡುತ್ತಿದೆ.

ಕೆಲ ವರ್ಷಗಳ ಹಿಂದೆ, ಭಾರತದಲ್ಲಿ ತರಬೇತಿ ಪಡೆದುಬಂದ ಯೋಗಶಿಕ್ಷಕರ ಸಹಾಯದಿಂದ ಯೋಗಾಭ್ಯಾಸದ ತರಗತಿಯನ್ನು ಆರಂಭಿಸಲಾಯಿತು. ಇದು ಅತ್ಯಂತ ಜನಪ್ರಿಯವಾಗಿದೆ – ಅದರಲ್ಲೂ ಭಾರತೀಯೇತರರಲ್ಲಿ. ವೇದಾಂತ ಹಾಗೂ ಶ್ರೀರಾಮಕೃಷ್ಣ-ವಿವೇಕಾನಂದರ ಬೋಧನೆಗಳಿಗೆ ಪ್ರಾಧಾನ್ಯ ನೀಡುವ ನಿರ್ವಾಣ ಎಂಬ ತ್ರೈಮಾಸಿಕ ಪತ್ರಿಕೆಯನ್ನು ಮಿಷನ್ನಿನ ಕೇಂದ್ರ ಹೊರತರುತ್ತಿದೆ. ತತ್ವಶಾಸ್ತ್ರ, ಪುರಾಣೇತಿಹಾಸಗಳು ಹಾಗೂ ಹಿಂದೂಧರ್ಮದ ಕುರಿತಾದ ಇನ್ನಿತರ ವಿಚಾರಗಳನ್ನೊಳಗೊಂಡ ಲೇಖನಗಳನ್ನು ಇದು ಪ್ರಕಟಿಸುತ್ತದೆ. ತರುಣ ಹಾಗೂ ಪ್ರಬುದ್ಧ ಓದುಗರಿಗಾಗಿ ತಕ್ಕ ಪುಸ್ತಕಗಳನ್ನು ಹೊಂದಿರುವ ವಾಚನಾಲಯವನ್ನೂ ಈ ಕೇಂದ್ರ ನಡೆಸುತ್ತಿದೆ. ಹೀಗೆ ಸಿಂಗಪುರದ ಯಶೋಗಾಥೆಯೊಂದಿಗೆ ಮೇಳೈಸುವ ರೀತಿಯಲ್ಲಿ ಮಿಷನ್ನಿನ ಕೇಂದ್ರವು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ✪